# ಅನುಬಂಧ-1

(ದಿನಾಂಕ: 03-09-2007 ರ ಸರ್ಕಾರದ ಆದೇಶ ಸಂಖ್ಯೆ: ಇಡಿ 44 ಎಸ್ ಎಲ್‌ಬಿ 2007(ಭಾಗ)ರ ಅನುಬಂಧ-1)

***ಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ ಮತ್ತು ನೋಂದಣಿ) ನಿಯಮಗಳು,, 1997ರಡಿ ಖಾಸಗಿ ಪೂರ್ವ ಪ್ರಾಥಮಿಕ, ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳನ್ನು ನೋಂದಣಿ ಮಾಡುವ ಸಲುವಾಗಿ (ಶಾಲೆಯನ್ನು ಪ್ರಾರಂಭಿಸಲು ಅನುಮತಿ ನೀಡುವುದಕ್ಕೆ) ಪರಿಶೀಲಿಸಲು ಉಪಯೋಗಿಸತಕ್ಕ ಚೆಕ್‌ಲಿಸ್ಟ್***

| ***ಕ್ರಮ ಸಂಖ್ಯೆ*** | ***ಅಂಶ / ಪ್ರಶ್ನೆ*** | ***ಉತ್ತರ/ಷರಾ*** |
|---|---|---|
| (1) | ನೊಂದಣಿ ಕೋರಿದ ಶಿಕ್ಷಣ ಸಂಸ್ಥೆಯ ಹೆಸರು ಮತ್ತು ವಿಳಾಸ | |
| (2) | ನೋಂದಾಯಿಸಲು ಉದ್ದೇಶಿಸಿದ ಖಾಸಗಿ ಶಾಲೆಯ ಹೆಸರು ಮತ್ತು ವಿಳಾಸ | |
| (3) | ನೊಂದಾಯಿಸಲು ಉದ್ದೇಶಿಸಿದ ಶಾಲೆಯಲ್ಲಿನ ಕಲಿಕೆಯ ಮಾಧ್ಯಮ | |
| (4) | (ಅ) ಖಾಸಗಿ ಶಾಲೆಗಳಿಗೆ ಸಂಬಂಧಿಸಿದಂತೆ, ಸದರಿ ನಿಯಮಗಳ ನಿಯಮ 3(1)ರಂತೆ ನಿಗದಿ ಪಡಿಸಿದ ನಮೂನೆಯಲ್ಲಿ ಹಾಗೂ ಕಾಲಮಿತಿಯೊಳಗೆ, ಅಂದರೆ, ಆಯಾ ವರ್ಷದ ಆಗಸ್ಟ್ 31ನೇ ತಾರೀಖಿನೊಳಗೆ ನೊಂದಣಿಗಾಗಿ ನಿಗದಿತ ಶುಲ್ಕದೊಂದಿಗೆ ಅರ್ಜಿಯನ್ನು ಸಲ್ಲಿಸಲಾಗಿದೆಯೇ? | |
| (5) | ಸದರಿ ನಿಯಮಗಳ ನಿಯಮ 3(2)ರಂತೆ ನಿಗದಿಪಡಿಸಿದ ನೋಂದಣಾ ಶುಲ್ಕವನ್ನು ಪಾವತಿಸಲಾಗಿದೆಯೇ? ಪ್ರಸ್ತುತ ಜಾರಿಯಲ್ಲಿರುವ ನೋಂದಣಾ ಶುಲ್ಕ ಈ ಕೆಳಕಂಡಂತೆ ಇರುತ್ತದೆ:-<br>ಪೂರ್ವ ಪ್ರಾಥಮಿಕ ಶಾಲೆಗಳು — 2000-00<br>ಕಿರಿಯ ಪ್ರಾಥಮಿಕ ಶಾಲೆಗಳು (1 ರಿಂದ 5ನೇ ತರಗತಿಗಳವರೆಗೆ) — 5000-00<br>ಹಿರಿಯ ಪ್ರಾಥಮಿಕ ಶಾಲೆಗಳು (ಕನ್ನಡ — 5000-00 | |

| | | | |
|---|---|---|---|
| | ಮಾಧ್ಯಮ- 6 ರಿಂದ 7ನೇ ತರಗತಿಗಳವರೆಗೆ) | | |
| | ಹಿರಿಯ ಪ್ರಾಥಮಿಕ ಶಾಲೆಗಳು (ಇಂಗ್ಲೀಷ್ ಮಾಧ್ಯಮ- 6 ರಿಂದ 7ನೇ ತರಗತಿಗಳವರೆಗೆ) | 10000-00 | |
| | ಪ್ರೌಢ ಶಾಲೆಗಳು (8 ರಿಂದ 10ನೇ ತರಗತಿಗಳವರೆಗೆ) | 10000-00 | |
| (6) | ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ ಸೆಕ್ಷನ್ 30(2)ರಡಿಯಲ್ಲಿ ನಿಗದಿಪಡಿಸಿದ, ಈ ಕೆಳಕಂಡ ಅಂಶಗಳನ್ನು ನೊಂದಣಾ ಪ್ರಾಧಿಕಾರ ಪರಿಗಣಿಸಿದೆಯೇ?<br>------------------------------------------<br>(ಎ) ಆ ಸ್ಥಳದ ಜನರಿಗೆ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸುವ ಅಗತ್ಯವಿದೆ ಎಂಬ ಬಗ್ಗೆ, ಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ ಮತ್ತು ನೋಂದಣಿ) ನಿಯಮಗಳು, 1997ರ ನಿಯಮ 4(1)ರ ಈ ಕೆಳಕಂಡ ಮಾನದಂಡಗಳಂತೆ ಪರಿಶೀಲಿಸಿ,ಅಗತ್ಯವಿದೆ ಅಥವಾ ಅಗತ್ಯವಿಲ್ಲವೆಂಬ ಬಗ್ಗೆ ಪರಿಶೀಲಿಸಿ, ಮೌಲ್ಯಮಾಪನ (assessment) ಮಾಡಲಾಗಿದೆಯೇ?:-<br>(ಅ) ಆಯಾಯಾ ಸ್ಥಳದ (locality) ಜನ ಸಂಖ್ಯೆ;<br>(ಆ) ಆಯಾಯಾ ಸ್ಥಳದಲ್ಲಿ ಪ್ರಸ್ತುತ ಲಭ್ಯವಿರುವ ಪ್ರಸ್ತುತ ಶೈಕ್ಷಣಿಕ ಸೌಲಭ್ಯ ಮತ್ತು ಅದರ ಸುತ್ತಮುತ್ತಲಿನ ಶಿಕ್ಷಣ ಸಂಸ್ಥೆಗಳ ಸ್ವರೂಪ;<br>(ಇ) ಪ್ರಸ್ತುತ ಶಿಕ್ಷಣ ಸಂಸ್ಥೆಗಳಲ್ಲಿನ ಪ್ರತಿಯೊಂದು ತರಗತಿ ಮತ್ತು ವಿಭಾಗದಲ್ಲಿನ ವಿದ್ಯಾರ್ಥಿಗಳ ಸಂಖ್ಯೆ;<br>(ಈ) ಪ್ರಸ್ತಾಪಿತ ಹೊಸ ಶಾಲೆಯ ಮತ್ತು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಣ ಸಂಸ್ಥೆಗಳ ನಡುವಿನ ವಿಸ್ತೀರ್ಣ (distance);<br>(ಉ) ಆಯಾಯಾ ಸ್ಥಳದಲ್ಲಿನ (locality) ವಾಸ | | ------------------------------<br>------------------------------ |

| | | |
|---|---|---|
| | ಮಾಡುವ ಜನ ಹಾಗೂ ಹಿಂದುಳುವಿಕೆಯ ಆಧಾರದ ಮೇಲೆ ಅದರ ಶೈಕ್ಷಣಿಕ ಅಗತ್ಯತೆ ಮತ್ತು ಸ್ಥಾನಮಾನ;<br>(ಊ) ಸಾಕ್ಷರತೆಯ ಶೇಕಡಾವಾರು;<br>(ಋ) ಸಕ್ಷಮ ಪ್ರಾಧಿಕಾರ ಸುಸಂಬದ್ಧವೆಂದು ಭಾವಿಸುವ ಇತರೆ ಯಾವುದೇ ಅಂಶ;<br>ಮೇಲಿನಂತೆ, ಮೌಲ್ಯಮಾಪನ ಮಾಡುವ ಸಂದರ್ಭದಲ್ಲಿ ಸದರಿ ನಿಯಮ 4ರ ಉಪ ನಿಯಮ (1)ರಡಿಯಲ್ಲಿನ ಪರಂತುಕದನ್ವಯ, ಆಯಾಯಾ ಸ್ಥಳದಲ್ಲಿನ (locality) ಪರಿಶಿಷ್ಠ ಜಾತಿ/ ಪರಿಶಿಷ್ಠ ಪಂಗಡಗಳ, ಹೆಣ್ಣುಮಕ್ಕಳ, ಅಂಗವಿಕಲರ ಮತ್ತು ಅಲ್ಪಸಂಖ್ಯಾತರ ಶೈಕ್ಷಣಿಕ ಅಗತ್ಯತೆಗಳನ್ನು ಹಾಗೂ ಅಲ್ಪಸಂಖ್ಯಾತರ ಹಿತಾಸಕ್ತಿ (wider interest) ಗಮನದಲ್ಲಿಟ್ಟುಕೊಳ್ಳಲಾಗಿದೆಯೇ?<br>ಮೇಲಿನಂತೆ ಮಾಡಲಾದ ಮೌಲ್ಯಮಾಪನದ ಮಾಹಿತಿಯನ್ನು ಆಯಾಯಾ ಸ್ಥಳದಲ್ಲಿನ (locality), ಹೊಸ ಶಿಕ್ಷಣ ಸಂಸ್ಥೆಗಳನ್ನು ತೆರೆಯಲು ಉದ್ದೇಶಿಸಿದ ಸಂಸ್ಥೆಗಳಿಗಾಗಿ ಮುಕ್ತವಾಗಿ ಇಡಲಾಗಿ ದೆಯೇ?<br>ಹೊಸ ಶಾಲೆಯ ನೊಂದಣಿಗಾಗಿ ಸಲ್ಲಿಸಲಾದ ಅರ್ಜಿಗಳನ್ನು, ಸಂಬಂಧಪಟ್ಟ ನೋಂದಣಾ ಪ್ರಾಧಿಕಾರ, ಸದರಿ ಮೌಲ್ಯಮಾಪನದ ಆಧಾರದ ಮೇಲೆ ಪರಿಶೀಲಿಸಿದೆಯೇ?<br>-------------------------------------------<br>(ಬಿ) ಸಕ್ಷಮ ಪ್ರಾಧಿಕಾರವು ನಿಯಮಿಸಿದ ರೀತಿಯಲ್ಲಿ ಸಂಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸಿ ಮುಂದುವರೆಸಿಕೊಂಡು ಹೋಗಲು ಸಾಕಷ್ಟು ಹಣಕಾಸಿನ ಏರ್ಪಾಡು ಇದೆಯೇ? ಅಂದರೆ, ಸದರಿ ನಿಯಮಗಳ ನಿಯಮ 4(2)(ಬಿ)(i)ರನ್ವಯ ಸಂಸ್ಥೆಯು ತನ್ನ ಹೆಸರಿನಲ್ಲಿ ಕನಿಷ್ಠ ರೂ.5.00 (ಐದು) ಲಕ್ಷಗಳ ನಗದು ಅಥವಾ ಅದರಷ್ಟು ಸ್ಥಿರಾಸ್ಥಿ ಹೊಂದಿದೆಯೇ? ಎಂಬ ಬಗ್ಗೆ; | -------------------------------<br>-------------------------------<br>------------------------------- |

| | | |
|---|---|---|
| | (ಸಿ) ಸಂಸ್ಥೆಯನ್ನು ನಿರ್ಮಲ ಮತ್ತು ಆರೋಗ್ಯಕರವಾದ ಪರಿಸರದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ ಎಂಬ ಬಗ್ಗೆ; | |
| | -------------------------------------------- | -------------------------------- |
| | (ಡಿ) ಒದಗಿಸಲು ಉದ್ದೇಶಿಸಲಾದ ಕಟ್ಟಡದ ನಿವೇಶನ, ಆಟದ ಮೈದಾನನಿಯಗಳಿಗೆ ಅನುಸಾರವಾಗಿವೆಯೇ? (ಸಂಸ್ಥೆಯ ಸ್ವಂತ ಕಟ್ಟಡವೇ? ಅಥವಾ ಬಾಡಿಗೆ/ಲೀಜ್ ಮೇಲೆ ಪಡೆದ ಕಟ್ಟಡವೇ?) | |
| | -------------------------------------------- | -------------------------------- |
| | (ಇ) ರಾಜ್ಯ ಸರ್ಕಾರವು ವಿದ್ಯಾರ್ಹತೆಯ ಹಾಗೂ ಸಿಬ್ಬಂದಿ ಮಾದರಿಯ ಬಗ್ಗೆ ರಚಿಸಿದ ನಿಯಮ ಗಳಿಗನುಸಾರ, ಅಂದರೆ, ಕರ್ನಾಟಕ ಶಿಕ್ಷಣ ಸಂಸ್ಥೆ ಗಳು (ಅನುದಾನಿತ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು, 1999ರ ಪ್ರಕಾರ ಅರ್ಹರಾದ ಬೋಧಕ ಸಿಬ್ಬಂದಿ ವರ್ಗವನ್ನು ನೇಮಕ ಮಾಡಿಕೊಳ್ಳಲಾಗಿದೆಯೇ? ಅಥವಾ ಮಾಡಿಕೊಳ್ಳಲಾಗುವುದೇ ಎಂಬ ಬಗ್ಗೆ (ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಖಾಸಗಿ ಅನುದಾನ ರಹಿತ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳ ನೌಕರರ ಕೆಲವು ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮಗಳು, 2005ರನ್ವಯ ಇದು ಅಗತ್ಯವಾಗಿದೆ); ಮತ್ತು | |
| | -------------------------------------------- | -------------------------------- |
| | (ಎಫ್) ಅರ್ಜಿಯಲ್ಲಿ ಒದಗಿಸಿದ ವಿವರಗಳು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಮತ್ತು ಆದೇಶಗಳ ಮೂಲಕ ಗೊತ್ತುಪಡಿಸಿದ ಅವಶ್ಯಕತೆಗಳಿಗೆ ಅನುಗುಣವಾಗಿವೆ ಎಂಬ ಬಗ್ಗೆ. ಯುಕ್ತ ಗಮನವನ್ನು ನೀಡತಕ್ಕದ್ದು.” | |
| | -------------------------------------------- | -------------------------------- |
| (7) | ಈ ಸುತ್ತೋಲೆಗೆ ಲಗತ್ತಿಸಿದ ಪಟ್ಟಿ-1ರನ್ವಯ | |

| | | |
|---|---|---|
| | ಶಾಲೆಯ ಮೂಲಭೂತ ಸೌಲಭ್ಯಗಳ ಮೌಲ್ಯಮಾಪನದ ಪ್ರಕಾರ ಶಾಲೆ ನಿಗದಿತ ಕನಿಷ್ಠ 40 ಅಂಕಗಳನ್ನು ಅಥವಾ ಅದಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿದೆಯೇ?<br>------------------------------------------- | |
| (8) | ಖಾಸಗಿ ಶಾಲೆಗಳಿಗೆ ಸಂಬಂಧಿಸಿದಂತೆ, ಕ್ರಮ ಸಂಖ್ಯೆ: (5)ರಲ್ಲಿ ಉಲ್ಲೇಖಿಸಲಾದ ಅಂಶಗಳ ಬಗ್ಗೆ ನೋಂದಣಾ ಪ್ರಾಧಿಕಾರದ ತೀರ್ಮಾನ. ಅದರ ಪ್ರಕಾರ ಅರ್ಜಿದಾರ ಶಾಲೆ ನೋಂದಾಯಿಸಲು ಅರ್ಹವಾಗಿದೆಯೇ? ನೋಂದಾಯಿಸಲು ಅರ್ಹರಲ್ಲವೆಂದು ತೀರ್ಮಾನಿಸಿದಲ್ಲಿ, ಅದಕ್ಕೆ ಕಾರಣಗಳೇನು? ಅರ್ಜಿ ಸ್ವೀಕರಿಸಿದ ಮೂರು ತಿಂಗಳೊಳಗಾಗಿ ಆ ಕಾರಣಗಳನ್ನು ನಮೂದಿಸಿ, ನೊಂದಣಾ ಅರ್ಜಿಯನ್ನು ತಿರಸ್ಕರಿಸುವ ಆದೇಶವನ್ನು ಅರ್ಜಿದಾರರಿಗೆ ನೀಡಲಾಗಿದೆಯೇ?<br>------------------------------------------- | |
| (9) | ಖಾಸಗಿ ಶಾಲೆಯನ್ನು ನೋಂದಾಯಿಸಲು ತೀರ್ಮಾನಿಸಿದಲ್ಲಿ, ನಮೂನೆ-2ರಲ್ಲಿ ನೋಂದಣಾ ಪ್ರಮಾಣ ಪತ್ರವನ್ನು ನೀಡಲಾಗಿದೆಯೇ?<br>------------------------------------------- | |
| (10) | ನೋಂದಾಯಿಸಲು ಉದ್ದೇಶಿಸಿದ ಶಾಲೆಗೆ ಸಂಬಂಧಿಸಿದಂತೆ ಭೋದಕ / ಭೋದಕೇತರ ಸಿಬ್ಬಂದಿಯನ್ನು ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಅನುದಾನ ಇಲ್ಲದ ಖಾಸಗಿ ಪ್ರಾರ್ಥಮಿಕ ಮತ್ತು ಪ್ರೌಢ ಶಾಲೆಗಳ ಹಾಗೂ ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳ ನೌಕರರ ಕೆಲವು ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮಗಳು, 2005ರನ್ವಯ ನಿಗದಿಪಡಿಸಿದ ಸೇವಾ ಷರತ್ತುಗಳನ್ನು ಲಭ್ಯ ಮಾಡಲಾಗುವುದೆಂದು ಮುಚ್ಚಳಿಕೆ ಪತ್ರವನ್ನು ಸಂಬಂಧಿಸಿದ ಸಂಸ್ಥೆ ನೋಟರಿಯ ಮುಂದೆ ಪ್ರಮಾಣೀಕರಿಸಿ, ನೋಂದಣಾ ಪ್ರಾಧಿಕಾರಕ್ಕೆ ಸಲ್ಲಿಸಲಾಗಿದೆಯೇ? | |